doc-124
T.P-2

SATYAVADI Founded 1917 Regd. No. M 1299

ಸತ್ಯವಾದಿ

(ಅರಮನೆ ಸಿದಸ್ತೇದಾರ್ ಎಂ. ವಿ. ಸುಬ್ಬರಾಯರಿಂದ ಸ್ಥಾಪಿಸಲ್ಪಟ್ಟದ್ದು)

ಸಂಪುಟ 29 ಸಂಚಿಕೆ 172 | ಗುರುವಾರ 21—3—46 | ಬಿಡಿ ಪ್ರತಿ 3 ಪೈ

ಯುದ್ಧಾನಂತರ

ಯುದ್ಧಾನಂತರ ಶಾಂತಿ ಲಭಿಸುತ್ತದೆಂಬ ಆಶೆ ಇತ್ತು. ಭಾರತದೇಶದಲ್ಲಿ ಆ ಆಶೆಯು ನಿರಾಶೆಯಾಗಿ ದೇಶವು ಕ್ಷೋಭೆಯಿಂದ ನರಳುತ್ತಿದೆ. ಈ ಸ್ಥಿತಿಯನ್ನು ಸರಿಪಡಿಸಲು ಸರಕಾರದ ಮಂತ್ರಿಗಳು ಪ್ರಯತ್ನಗಳನ್ನು ಮಾಡುತ್ತಲೇ ಇದ್ದಾರೆ. ದೇಶದ ಪ್ರಮಾಣವನ್ನು ಕಾಲು ಭಾಗದಷ್ಟು ತಗ್ಗಿಸಿದವರು. ಭಾರತದೇಶದವರಿಗೆ ಏಸಹಾ ಬೇರೆ ಯಾವ ಆಹಾರ ಪದಾರ್ಥವೂ ದೊರೆಯದು, ಆ ಗಲೂಡದೆಯೂ ಆಜ್ಞೆ ಮಾಡಿರುವರು. ಅಮೆರಿಕಾಕ್ಕೆ ಹೋಗಿರುವ ಭಾರತೀಯ ಆಹಾರ ರಾಯಭಾರ ವರ್ಗದವರು ತಮ್ಮ ಕಾರ್ಯಕ್ರಮವನ್ನು ಪ್ರಾರಂಭಿಸಿ ಬ್ರಿಟಿಷ್ ಆಧಿಪತ್ಯದಲ್ಲಿಯೂ ಇತರ ಪ್ರೌಂತ್ಯಗಳಿಗೆ ಕಳುಹಿಸುವುದಕ್ಕಾಗಿ ತೆಗೆದಿಟ್ಟಿದ್ದ ಆಹಾರ ಪದಾರ್ಥಗಳನ್ನು ಭಾರತದೇಶಕ್ಕೆ ಕಳುಹಿಸಲು ಏರ್ಪಾಡು ಮಾಡುತ್ತಿರುವರಂತೆ. ಧನವಂತರನ್ನು ಬೀಗವನ್ನು ತೆಗೆಯುವುದರೊಳಗಾಗಿ ಪ್ರಾಣಗಳು ಎದ್ದುಹೋಗುತ್ತವೆ. ಏನ್ನು ವಂತೆ ಆಹಾರ ಪದಾರ್ಥಗಳ ಸರಬರಾಯಿ ಕೂಡ, ಆಗಬೇಕಾದ ಕೆಲಸವೆಲ್ಲಾ ಮುಗಿದ ತರುವಾಯು ಆಗುವುದೋ ಏನೋ?

ಭಾರತ ರಾಜಕೀಯಗಳಲ್ಲಿ ಒಂದು ನಿರ್ಧಾರಕ್ಕೆ ಬರಲು ಬ್ರಿಟಿಷ್ ಮಂತ್ರಿ ವರ್ಗವು ಒಲ್ಲದು. ಅವರು ಇಲ್ಲಿ ಮೂರು ತಿಂಗಳು ಇರಲಿರುವುದು. ಜಿನ್ನಾ ಸಾಹೇಬರು ತಮ್ಮ ಪಾಕಿಸ್ತಾನದ ವಾದವನ್ನು ಬಿಡಲೊಲ್ಲರಾದುದರಿಂದ ಫಲವು ಹೇಗಾಗುವುದೋ ನೋಡಬೇಕಾಗಿದೆ.

ಇಂಡೋನೇಷಿಯಾದಲ್ಲಿ ರಾಜಕೀಯ ರಾಯಭಾರಗಳು ಚುರುಕಾಗಿಯೇ ನಡೆಯುತ್ತಲಿವೆ ಫಲವು ಹೇಗಾದರೂ ಇರಲಿ, ಈಗ ಪರಿಸ್ಥಿತಿಯು ಶಾಂತವಾಗಿದೆ.

ಮಿತ್ರ ರಾಜ್ಯಗಳು ಸ್ಪೇನ್ ಮೇಲೆ ಆಯುಧಗಳಿಲ್ಲದ ದಂಡಯಾತ್ರೆಯನ್ನು ಪ್ರಾರಂಭಿಸಿವೆ ಫ್ರಾಂಕೋರವರು ಅಧಿಕಾರದಿಂದ ತೊಲಗಿದ್ದಲ್ಲದೆ ಸ್ಪೇನಿನ ಮೇಲೆ ಹಾಕಿರುವ ನಿರ್ಬಂಧಗಳನ್ನು ತೆಗೆಯುವುದಿಲ್ಲವೆಂದೂ. ಈ ಕಾರಣದಿಂದ ಸ್ಪೇನಿನ ಪ್ರಜೆಗಳೇ ಅಧಿಕಾರವನ್ನು ತಮ್ಮ ಕೈಗೆ ತೆಗೆದುಕೊಂಡು ಫ್ರಾಂಕೋವನ್ನು ತೆಗೆದು ಹಾಕಬೇಕೆಂದೂ ಅಮೇರಿಕಾ ಬ್ರಿಟನ್, ಮೊದಲಾದ ಮುಖಂಡ ರಾಷ್ಟ್ರಗಳವರು ಹೇಳಿಸುತ್ತಿದ್ದಾರೆ ಒಟ್ಟಿನಲ್ಲಿ ಪ್ರಸ್ತುತ ಪ್ರಪಂಚ ಸ್ಥಿತಿಯು ಬಿರುಗಾಳಿಯ ಮುಂಭಾಗದಲ್ಲಿಯ ಪ್ರಶಾಂತತೆಯಂತಿದೆ. ಸ್ವಿಟ್ಜರ್ಲೆಂಡು ಫ್ರಾಂಕೋಗೆ ಹೆಲ್ಲುಗಳನ್ನು ಸರಬರಾಯಿ ಮಾಡುತ್ತಿರುವುದೆಂಬ ಸುದ್ದಿಯೂ ಈಚೆಗೆ ಬಂದಿದೆ.

ವ್ಯಯ ನಾಮ ಸಂವತ್ಸರವು ಎಲ್ಲಾ ಒಗೆಗಳಲ್ಲಿಯೂ ವ್ಯಯರೂಪವಾಗಿ ಪರಿಣಮಿಸುವುದೋ ಏನೋ?

ಬರ್ಲಿನಿನಲ್ಲಿ ಹೊಸ ಭಯೋತ್ಪಾತ

ಪ್ರಜೆಗಳ ಆರವಿಲ್ಲದ ಮಾಯ!

ವೃತ್ತಾಂತ ಸಂಗ್ರಹ

ಬರ್ಲಿನ್ನಿನಲ್ಲಿ ಕಾಳ ಸಂತೆಯಲ್ಲಿ ಸುಮಾರು ಸಾವಿರ ಮಂದಿಯನ್ನು ಪೋಲೀಸರು ಬಂಧಿಸಿದ್ದಾರೆ.

ಸಿಂಗಪುರದಲ್ಲಿ ಮಾರ್ಚಿ 25 ಕ್ಕೆ ಅಲಾರ್ಡ್ ಕಿಲ್ಲೆದಾರ್ ಅಧ್ಯಕ್ಷತೆಯಲ್ಲಿ ಆಹಾರ ಸಮ್ಮೇಳನ ನಡೆಯುವುದೆಂದೂ ಭಾರತ ಸರಕಾರದ ಆಹಾರ ಶಾಖೆಯು ಜಂಟೀ ಕಾರ್ಯದರ್ಶಿಗಳು ಹೋಗುವರೆಂದೂ ತಿಳಿಯಬಂದಿದೆ.

ಸಿಂಗಪುರ ಮಾ 18—. ಪಂ॥ ನೆಹರೂರವರು ಇಲ್ಲಿಗೆ ತಲಪಿದರು, ಮೌಂಟು ಬೇಟನನ್ನು ಭೇಟಿ ನೂಡಿದರು.

ಮುಂಬೂರಿಯಾದಿಂದ ರಷ್ಯಾ ಸೈನ್ಯ ವಾಪಸ್ಸಾಗುತ್ತಿದೆಯೆಂದು ತಿಳಿಯಬಂದಿದೆ

ಜೋಹಾನ್ಸ್‌ಬರ್ಗ್ ಮಾ 17— ಇಲ್ಲಿ ನಡೆದ ಒಂದು ಭಾರತೀಯರ ಮಹಾ ಸಭೆಯಲ್ಲಿ ಅಲ್ಲಿ ಭಾರತೀಯರ ವಿರುದ್ಧವಾದ ಮಸೂದೆಯನ್ನು ಪ್ರತಿಭಟಿಸಲು ತೀರ್ಮಾನಿಸಿದ್ದಾರೆ.

ಬರ್ಲಿನ್ ಮಾ 17— ಬರ್ಲಿನ್ನಿನಲ್ಲಿ ಹೊಸ ರೀತಿಯ ಭಯವೊಂದು ಉದ್ಭವಿಸಿದೆ. ಇದು ಯಾರಿಗೂ ಇನ್ನೂ ಗೊತ್ತಾಗಿಲ್ಲ ಇದು ರಾತ್ರಿ ಹೊತ್ತಿನಲ್ಲಿ ನಡೆದು, ಬರ್ಲಿನ್ ಪ್ರಜೆಗಳು ಏನೊಂದು ಸುಳಿವೂ ಇಲ್ಲದೆ ಮಾಯವಾಗುತ್ತಿರುವರು ರಾಜಕೀಯ ಚಳುವಳಿಗಳೇನಾದರೂ ಇದಕ್ಕೆ ಹಿಂದೆ ಇರುವುದೇ ಎಂದು ಹಿಂದು ಊಹೆ!

ನವದೆಹಲಿ, ಮಾ 18 - ಬ್ರಿಟಿಶ್ ಮಂತ್ರಿ ಮಂಡಲ ನಿಯೋಗವು ದೆಹಲಿಗೆ ಬಂದೊಡನೆ ಪತ್ರಿಕಾ ಸಮ್ಮೇಳನ ನಡೆಸಲಿರುವುದೂ ಎಪ್ರಿಲ್ 3 ರಲ್ಲಿ ಗಾಂಧೀಜಿಯವರನ್ನೂ, 4 ರಲ್ಲಿ ಜಿನ್ನಾರವರನ್ನು ಭೇಟಿ ಮಾಡುವರೆಂದು ಹೇಳಲಾಗಿದೆ.

ಪಂಜಾಬು ವಿಶ್ವವಿದ್ಯಾಲಯದವರು ಎಂ. ಏ., ಎಂ. ಎಸ್ಸಿ. ಪರೀಕ್ಷೆಗಳನ್ನು ಮುಂದೂಡಲು ಒಪ್ಪದಿರುವುದರಿಂದ ವಿದ್ಯಾರ್ಥಿಗಳು ಪರೀಕ್ಷೆಯನ್ನು ಬಹಿಷ್ಕರಿಸುವೆವೆಂದು ತೀರ್ಮಾನಿಸಿರುವರೆಂದು ತಿಳಿಯಬಂದಿದೆ

ಪೂನಾ, ಮಾ 19 — ದಕ್ಷಿಣ ಆಫ್ರಿಕಾದಲ್ಲಿ ಭಾರತೀಯ ವಿರುದ್ಧ ಮಸೂದೆಯ ಪ್ರಪಂಚ ಯುದ್ಧಕ್ಕೆ ಭೇಜಬಿತ್ತಿದಂತಾಗುವುದೆಂದು ಮಹಾತ್ಮಾ ಗಾಂಧೀಜಿಯವರು ಅಭಿಪ್ರಾಯವನ್ನು ಪಟ್ಟಿರುತ್ತಾರೆ

ಅಲಹಾಬಾದ್, ಮಾ 19 — ರೇಷ್ಮೆನಲ್ಲಿ ಶೇ 50 ಖೋತಾ ಮಾಡಿದ್ದಕ್ಕಾಗಿ ಅನ್ನವಸ್ತ್ರ ನಡೆಸುತ್ತಿದ್ದ ಪೋಲೀಸರು ಸೂಪರಿಂಟೆಂಡೆಂಡರು ವಿಚಾರವನ್ನು ಸಹಾನುಭೂತಿಯಿಂದ ಪರೀಕ್ಷಿಸುವುದಾಗಿ ತಿಳಿಸಿದ್ದರಿಂದ ಅನ್ನವನ್ನು ತಿಂದರು

ಮೈಸೂರು ಕಾಂಗ್ರೆಸ್ಸಿನಲ್ಲಿ 'ನಂಚು'

(ಮುಂದುವರಿದುದು)

ಶ್ರೀ ದಾಸಪ್ಪನವರು ರಚನಾತ್ಮಕ ಕಾರ್ಯದಲ್ಲಿ ಲೀನರಾಗಿದ್ದುದರಿಂದ ಕಾಂಗ್ರೆಸ್ಸಿನ ದಿನಚರಿ ವ್ಯವಹಾರಗಳಲ್ಲಿ ಸೇರುತ್ತಿರಲಿಲ್ಲವೆಂಬುದೂ ಅವರ ಸೋಲಿಗೆ ಒಂದು ಕಾರಣವೆಂದು ಸೂಚಿಸಿದೆ. ಕಾಂಗ್ರೆಸ್ಸಿನ ಕಾರ್ಯಗಳಲ್ಲಿ ದಿನಚರಿ ಮತ್ತು ವಿಶೇಷವೆಂಬ ಭೇದ ಕಲ್ಪನೆಯನ್ನು ಗುಟ್ಟು ಒಂದಿರಬೇಕು. ರಚನಾತ್ಮಕ ಕಾರ್ಯವು ದಿನಚರಿಗೆ ಸೇರಿರುವುದಿಲ್ಲವೆಂದೂ ಕೆಲಸಗಾರರ ಬೆಂಬಲವಿಲ್ಲವೆಂದೂ ಹೇಳುವುದು ಶ್ರೀ ದಾಸಪ್ಪನವರು ಜನಪ್ರೀತರಲ್ಲವೆಂಬ ಧ್ವನಿಯನ್ನು ಕೊಡುವ ಅಪಪ್ರಚಾರವಾಗಿದೆ. ಬೆಂಗಳೂರು ಮುನಿಸಿಪಾಲಿಟಿ ಅಧ್ಯಕ್ಷ ಚುನಾವಣಾ ಪ್ರಕರಣದಿಂದ ಜನಗಳ ಮನಸ್ಸು ಕದಡಿ ಹೋಗಿತ್ತು. ಅದು ಇನ್ನೂ ಇಳಿಯಾಗಲಿಲ್ಲ. ಅಷ್ಟರೊಳಗಾಗಿಯೇ ಮೈಸೂರಿನಲ್ಲಿ ನಡೆದ ವರ್ಕಿಂಗ್ ಕಮಿಟಿ ಚುನಾವಣೆಯೂ 'ಸಾಧ್ವಿ' ಯ ಲೇಖನವೂ ಜನಗಳ ಮನಸ್ಸನ್ನು ಇನ್ನಷ್ಟು ಕಲುಷಿತವನ್ನಾಗಿ ಮಾಡಿದೆ. ಮೈಸೂರು ಕಾಂಗ್ರೆಸ್ಸು ಪ್ರಭಾವಯುತವಾಗಿ ಬೆಳೆಯಬಾಳಿ ಬೆಳಗಲು ಮುಖ್ಯ ಕಾರಣವಾಗಿರುವವರಲ್ಲಿ ಶ್ರೀ ದಾಸಪ್ಪ, ಭಾಷ್ಯಂರವರು ಪ್ರಮುಖವ್ಯಕ್ತಿಗಳು ಇಂತಹ ಮಹನೀಯರುಗಳ ವಿಷಯದಲ್ಲಿಯೇ ಈ ರೀತಿಯ ಪ್ರಚಾರಗಳು ನಡೆಯುವುದಾದರೆ, ಕಾಂಗ್ರೆಸ್ ಕಾರ್ಯಕರ್ತರುಗಳೆಂದು ಹೇಳಲಾದವರ ಕೈಯಲ್ಲಿ ಏನಾದರೊಂದಿಷ್ಟು ಅಧಿಕಾರದೊರೆತರೆ. ಆಗ ತಮ್ಮ ಅವಸ್ಥೆಯೇನೆಂಬುದನ್ನು ಜನಗಳು ಊಹಿಸಲು ಈ ಚುನಾವಣೆಯೂ ಪತ್ರಿಕಾ ಲೇಖನಗಳೂ ಸಹಕಾರಿಯಾಗುವುದಿಲ್ಲವೇ?

ಮೊನ್ನೆಯ 'ಸಾಧ್ವಿ' ಪತ್ರಿಕೆಯಲ್ಲಿ ಶ್ರೀ ಡೊರೆಸ್ವಾಮಿಗಳು ಬರೆದ ಪತ್ರದಲ್ಲಿ ಸಂಪಾದಕರು ತಮ್ಮ 'ಲೇಖನಕ್ಕೆ ಪ್ರತ್ಯುತ್ತರ ಬರುವುದೆಂದು ಮೊದಲೇ ನಿರೀಕ್ಷಿಸಿದ್ದುದಾಗಿ ಅಭಿಪ್ರಾಯ ತಿಳಿಸಿರುತ್ತಾರೆ. ತಮ್ಮ ಲೇಖನದ ಅಸಮಂಜಸತೆಯ ವಿಷಯವನ್ನು ಅವರೇ ಒಪ್ಪಿರುವುದರಿಂದ ಈ ಚರ್ಚೆಯನ್ನು ಇಲ್ಲಿಗೆ ಮುಗಿಸುವೆವು.

'ಮಲ್ಲ'

ಸ್ಪೋಟವಾಯಿತು

ಲಂಡನ್ ಮಾ 16— ಬರ್ಲಿನ್ನಿನಲ್ಲಿಯ ರಷ್ಯನರ ಭಾಗದಲ್ಲಿ ಮದ್ದು ಗುಂಡು ಶೇಖರಿಸಲಾಗಿದ್ದ ಪೋಲೀಸು ಠಾಣೆಯಲ್ಲಿ ಸ್ಪೋಟವಾಗಿ ಸಾವುನೋವಾಗಿರುವುದು.

ಮೈಸೂರು ಮಾ 21— ದಳವಾಯಿ ಹೈ ಸ್ಕೂಲಿನ ಪ್ರೇಷಕರ ದಿನಾಚರಣೆಯು ಇವತ್ತು ನಡೆಯುವುದಂತೂ, ಪೌರ ಸಭಾಧ್ಯಕ್ಷರಾದ ಶ್ರೀ ರಾವ ಜಂದ್ರ ರಾವ್ ಬಾಂಭೋರೆಯವರು ಅಧ್ಯಕ್ಷತೆ ವಹಿಸುವರೆಂದೂ ತಿಳಿಯುಬಂದಿರ.

ಮೈಸೂರು ಮಾ 19— ಮೈಸೂರು ಜಿಲ್ಲಾ ಸಮ್ಮೇಳನವು ಈ ದಿವಸ ಟೌನ್ ಹಾಲಿನಲ್ಲಿ ನ್ಯಾಯಾಂಗ ಸಚಿವರಾದ ಮಿ || ನಸಿರುಲ್ಲಾ ಷರೀಫರ ಅಧ್ಯಕ್ಷತೆಯಲ್ಲಿ ನಡೆಯಿತು

ರಂಗೂನ್ ಮಾ 18— ರಂಗೂನು ಕೇಂದ್ರ ಜೈಲಿನಲ್ಲಿರುವ 500 ಮಂದಿಯರನ್ನು ಭಾಂತಕ್ಕೆ ಮಾರ್ಚ್ 24 ರಲ್ಲಿ ತರಲಾಗುವುದೆಂದು ವರದಿಯಾಗಿದೆ

ನು ಭಾ ಷ'

ರವರ ಜೀವನ ಚರಿತ್ರೆ

ಅಂದು ಬಾಬು —

— ಇಂದು ನೇತಾಜಿ

ಬರೆದವರು " ಕಾಂತ್ "

ಸಾಹಿತ್ಯ ಮಂದಿರ

ಜಗನ್ಮೋಹನ ಬಂಗ್ಲೆ ರಸ್ತೆ

ಮೈಸೂರು

For Good Printing

L. N. Press

Sriramp et MYSORE

At Opera —

Morning Shows

From 22–3–46

LADY OF

BURLSQUE

೨ ನೇ ವಾರ

ಮೆಹತಾಬ್ — ಸುರೇಂದ್ರ

ಪಾತ್ರವಹಿಸಿರುವ

....ವಿ ಶ್ವಾ ಸ್....

At Ranjit

2 nd Week

Shirin Farad

— with —

RAGINI & JAYANT

ನು ಆರೋಗ್ಯ ಆನಂದದಾಯಕ



ಜೀವಿತಕ್ಕೆ

ಸ್ಟೀಮರ್ ಮಾರ್ಕಿನ ಉತ್ಕೃಷ್ಟ

ಹಿಂಗಿನ ಪುಡಿ ಉಪಯೋಗಿಸಿ.

ಈ ಹಿಂಗಿನ ಪುಡಿಯು ಶಿತ್ಯಂತ ಪರಿಶುದ್ಧವಾದುದು. ನೀರನ್ನು ಸೇರಿಸದೇ ತಯಾರಿಸಲ್ಪಟ್ಟಿದೆ. ಅತಿ ಘನವಾದ ಗುಣವುಳ್ಳದ್ದು. ಎಲ್ಲಾ ಸನಾತನ ಸಂಸಾರಂಗಳಲ್ಲಿ ಉಪಯೋಗಿಸಲು ಅರ್ಹವಾದುದು. ಒಂದು ಚಿಕ್ಕ ಚಿಟಿಕೆಯಷ್ಟನ್ನು ತಯಾರಿಸುತ್ತಿರುವ ಆಹಾರ ಪದಾರ್ಥಗಳಲ್ಲಿ ಹಾಕಿದಲ್ಲಿ ದೀರ್ಘವಾದ ಸುಮನೋಹರವಾದ ವಾಸನೆಯನ್ನು ಕಲ್ಪಿಸುವುದಲ್ಲದೆ, ಹೆಚ್ಚು ರುಚಿಯನ್ನುಂಟು ಮಾಡುತ್ತದೆ. ಎಲ್ಲಾ ಶರೀರ ವ್ಯಾಧಿಗಳಿಗೂ ಒಂದು ಸಂಪಾರಿಕ ಔಷಧದಂತಿದೆ. ಒಂದು ಸಾರಿ ಉಪಯೋಗಿಸಿದ್ದಲ್ಲಿ ನಂಬಿಕೆಯನ್ನುಂಟು ಮಾಡುವುದಲ್ಲದೆ. ಸದಾ ಅದನ್ನು ಉಪಯೋಗಿಸುವಂತೆ ಮನಗೊಳಿಸುವುದು. ಎಲ್ಲಾ ಸ್ಥಾನಿಕ ವ್ಯಾಪಾರಿಗಳಲ್ಲೂ ಒಂದು, ಅರ್ಧ, ಕಾಲು ಪೌಂಡು ಮತ್ತು ಒಂದು ಪಲಂ ಪ್ಯಾಕೆಟ್ಟುಗಳಲ್ಲಿ ದೊರೆಯುತ್ತದೆ. ಬೆಲೆ ಒಂದು ಪೌಂಡಿಗೆ ರೂ. 3-8-0 ಮಾತ್ರ.

ನಮ್ಮ ಸುಳಂದ ಅಡಿಕೆಪುಡಿ ಒಂದು ವೈಶಿಷ್ಟ್ಯ.

ನಮ್ಮ ಶ್ರೀ ಓಂ ಗುಂಟಿನ ಕೇಸರಿ ಅತ್ಯಂತ ಪರಿಶುದ್ಧವಾದ ಔತರಿಯಾದುದು. ವಿವರಂಗಳಿಗೆ ಮತ್ತು ಕ್ಯಾಂಪಲಿಗೆ ಬರೆಯಿರಿ —

ವೆಲ್ಲಭದಾಸ್ ತೇಜ್‌ಪಾಲ್,

(ಹಿಂಗು, ಕೇಸರಿ ಮತ್ತು ಕಿರಾಣ ವ್ಯಾಪಾರಿಗಳು)

೧೪. ಗೋವಿಂದಪ್ಪ ನಾಯಕ್ ರಸ್ತೆ, ಜಿ. ಟಿ. ಮದರಾಸು.

ಉಡುಪುಗಳನ್ನು ಅತಿ ಚೊಕ್ಕಟವಾಗಿ ಒಗೆದು

— ಶುಭ್ರಮಾಡುವ ಸಾಧಕ —

ಮೈಸೂರು ಸಾಬೂನನ್ನು ಉಪಯೋಗಿಸಿದ ಹೊರತು, ಆಶ್ಚರ್ಯಕರವಾದಷ್ಟು ಮಟ್ಟಿಗೆ ಆದರಲ್ಲಿ ಅಡಗಿರುವ ನಿರ್ಮಲೀಕರಣಶಕ್ತಿಯನ್ನು ತಿಳಿಯಲಾರಿರಿ;

ಈ ಸಾಬೂನನ್ನು ಇವತ್ತು ಉಪಯೋಗಿಸಿ ನೋಡಿ;

ಅದರ ಪ್ರತಿಫಲವನ್ನು ಕಂಡು ನೀವೇ ಬೆರಗಾಗುವಿರಿ.

ಮೈಸೂರು

ಸಾಬೂನು

ಕೊಳಕು ಬಟ್ಟೆಗಳನ್ನು

ಸ್ವಚ್ಛಗೊಳಿಸುವುದು

ಗೌರ್ನಮೆಂಟ್ ಸೋಪ್ ಫ್ಯಾಕ್ಟರಿ, ಬೆಂಗಳೂರು.

ಹಸಿ ಬೆಟ್ಟದಪುರದ

ಹೊಗೆಸೊಪ್ಪಿನಿಂದ ತಯಾರಾದ

— ಉಂಡೇ ನಶ್ಯ —

ಇಲ್ಲಿ ದೊರೆಯುತ್ತೆ

ರಾವಂದೂರ್ ವೀರಶೆಟ್ಟಿ & ಸನ್ಸ್

ಶಿವರಾಂಪೇಟೆ ಮೈಸೂರು.

Edited, Printed and published by M. S. Krishna Rao, at the Satvavadi Press, Chamaraja Agrahar, Mysore

ಅಲ್ಪ ವ್ಯಯದ ಕಾಯಕಲ್ಪ

ಶಕ್ತಿಸುಧಾ

ರಕ್ತವೃದ್ಧಿಗೆ — ಧಾತುಪುಷ್ಟಿಗೆ

ಸಂಜೀವನ

ಬೆಲೆ ಡಬ್ಬಿ ೧ ಕ್ಕೆ ರೂ. ೧.೮-೦

ವಿಳಾಸ— ಶಕ್ತಿಸುಧಾ, ೧೦೬೭ ಚಾಮರಾಜಪುರಂ, ಮೈಸೂರು